# ನಾಯಕನೇ ಆಗಬೇಕಿಲ್ಲ ಪೋಷಕ ಪಾತ್ರಕ್ಕೂ ಸೈ

## ತೇಜಸ್ ಗೌಡ ವಿ.
ಸ್ಟಾರ್‌ಸುವರ್ಣದ
'ಶ್ರೀ ರೇಣುಕಾ ಯಲ್ಲಮ್ಮ' ಭೈರವ



◆ **ಭೈರವನ ಪಾತ್ರದ ವಿಸ್ತರಣೆ ಬಗ್ಗೆ ಏನು ಹೇಳುತ್ತೀರಿ?**

ಬೆಂಗಳೂರಿನಲ್ಲಿಯೇ ಹುಟ್ಟಿಬೆಳೆದ ನಾನು ಬಿಸಿಎ ಪದವೀಧರನಾಗಿದ್ದೇನೆ. ಓದಿದ ನಂತರ ಉದ್ಯೋಗದ ಆಯ್ಕೆಯಿತ್ತು. ಅದರ ಜೊತೆಗೆ ಕಿರುತೆರೆಗೂ ಅವಕಾಶ ಬಂತು. ನಟನೆ ಆಸಕ್ತಿ ಇದ್ದಿದ್ದರಿಂದ ಈ ಎರಡರಲ್ಲಿ ನಟನೆಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡೆ. 2021 'ಎಡೆಯೂರುಶ್ರೀ ಸಿದ್ಧಲಿಂಗೇಶ್ವರ'ದಲ್ಲಿ ಸಂಗಮೇಶ ಎನ್ನುವ ಪಾತ್ರವನ್ನು ನಿರ್ವಹಿಸಿದೆ. ಒಂದೂವರೆ ವರ್ಷ ಅದನ್ನು ಮಾಡಿದೆ. ಅದೇ ಸಮಯದಲ್ಲಿ ತಮಿಳಿನಿಂದಲೂ ಒಂದು ಅವಕಾಶ ಸಿಕ್ಕಿತು. ಅದು ಮುಗಿಯುತ್ತಿದ್ದಂತೆ ಎಡೆಯೂರು ನಿರ್ಮಿಸಿದ ತಂಡವೇ 'ಶ್ರೀ ರೇಣುಕಾ ಯಲ್ಲಮ್ಮ'ದಲ್ಲಿ ಭೈರವನ ಪಾತ್ರಕ್ಕೆ ಆಹ್ವಾನಿಸಿತು. ವಿಭಿನ್ನ ಅಭಿರುಚಿ ಇರುವ ಈ ಪಾತ್ರ ನನಗೂ ನಟನೆಯ ವೈವಿಧ್ಯ ಆಯಾಮಗಳನ್ನು ಕಲಿಸಿದೆ. ಸಿಕ್ಕಾಪಟ್ಟೆ ಸಿಟ್ಟಿನ ವ್ಯಕ್ತಿತ್ವದ ಭೈರವ ಇದ್ದಕ್ಕಿದ್ದಂತೆ ಪ್ರೇಮಕ್ಕೆ ಬಿದ್ದು ಪ್ರೀತಿಸುವ ಹುಡುಗನಾಗುತ್ತಾನೆ. ಪ್ರೀತಿ ಭಗ್ನವಾಗುತ್ತಿದೆ, ತನ್ನ ಪ್ರೀತಿ ಸಿಗುವುದಿಲ್ಲ ಎಂದು ಕೊರಗುವ ಹೊತ್ತಿಗೆ ಶಿವ–ಪಾರ್ವತಿ ಬಂದು ಮದುವೆ ಮಾಡಿಸುತ್ತಾರೆ. ಸಂಸಾರ ಚೆನ್ನಾಗಿ ನಡೀತಾ ಇದೆ.

ಇದೇ ಹೊತ್ತಿಗೆ 'ಅಣ್ಣಯ್ಯ'ದಲ್ಲಿ ವಿಶೇಷ ಪಾತ್ರ ಸಿಗುತ್ತದೆ. ಮುಗ್ಧ ಪಾತ್ರ ಅದು ವೀಕ್ಷಕರ ಮನಸ್ಸಿನಲ್ಲಿ ನೆಲೆಯೂರಿದೆ. ಕೆಲವರು 'ಸ್ವಾತಿ ಮುತ್ತಿನ' ಸುದೀಪ್ ನೆನಪಾಗುತ್ತಾರೆ ಅಂದರೆ ಇನ್ನೂ ಕೆಲವರು 'ರಾಮಾಚಾರಿ'ಯ ರವಿಚಂದ್ರನ್ ನೋಡಿದಂತೆ ಆಗುತ್ತದೆ ಎನ್ನುತ್ತಾರೆ. ಅಷ್ಟರ ಮಟ್ಟಿಗೆ ಪಾತ್ರ ಗಟ್ಟಿಯಾಗಿ ಕುಳಿತಿದೆ. ಎರಡೂ ಪಾತ್ರಗಳು ಸಖತ್ತಾಗಿವೆ.

◆ **ಅಭಿನಯದ ಆಸೆ ಹುಟ್ಟಿದ್ದು ಹೇಗೆ?**

ಕಾಲೇಜಿನಲ್ಲಿ ಇದ್ದಾಗ ನಾಟಕ ಮಾಡಬೇಕು ಎಂದು ಅನ್ನಿಸಿತು. ನಟನಾಗಬೇಕು ಎನ್ನುವ ಆಸೆ ಇತ್ತು. ರಂಗಭೂಮಿ ಸಹಾಯ ಆಗಬಹುದು ಎನ್ನುವ ಯೋಚನೆ ಬಂತು. ಆದರೆ ಅದು ನನಗೆ ಸಂಪೂರ್ಣ ಹೊಸದು. ಹೀಗಿರುವಾಗ 'ಆಕ್ಟ್ ರಿಯಾಕ್ಟ್' ತಂಡದ ಜೊತೆ ಸೇರಿಕೊಂಡು 'ಧನ್ವಂತರಿ ಚಿಕಿತ್ಸೆ'ಗೆ ಸಿದ್ಧತೆ ಮಾಡಿಕೊಂಡೆ. ಮುಂದೆ ಏನಾಗುತ್ತೋ ನೋಡೋಣ ಎನ್ನುವ ಸಂದೇಹದಲ್ಲಿಯೇ ಬಣ್ಣ ಹಚ್ಚಿದೆ. ಅದಕ್ಕಾಗಿ ಸುಮಾರು ಎರಡು ತಿಂಗಳು ತಾಲೀಮು ಮಾಡಿದೆ. ನಮ್ಮ ಮನೆಯಲ್ಲಿ ಈ ಮೂಲಕ ಬೆಳೆಯಬಲ್ಲೆ ಎನ್ನುವ ನಂಬಿಕೆ ಸಾಲದೆ ಅಪ್ಪ ನಿರಾಸೆ ತೋರಿಸಿದರು. ನಾಟಕ ನೋಡಿದ ನಂತರ ಅವರೇ ಏನಾದರೂ ಮಾಡು ಎಂದು ನನ್ನ ಆಯ್ಕೆ ನನಗೆ ಬಿಟ್ಟರು. ಆಡಿಷನ್ ಲುಕ್ ಟೆಸ್ಟ್ ಕೊಡಲು ಶುರುಮಾಡಿದೆ. ಅಷ್ಟರಲ್ಲಿ ಕೋವಿಡ್ ಕಾರಣಕ್ಕೆ ಲಾಕ್‌ಡೌನ್ ಆಯಿತು. ನಂತರ ಆಡಿಷನ್ ನೀಡುತ್ತಿದ್ದೆ. ಸಂಗಮೇಶ ಪಾತ್ರ ಸಿಕ್ಕಿತು. ಇದನ್ನು ಮಾಡುತ್ತಿರುವಾಗಲೇ ಸಿದ್ಧಲಿಂಗೇಶ್ವರರ ಪಾತ್ರ ಮಾಡುತ್ತಿದ್ದ ವಲ್ಲಭಣ್ಣ ತಮಿಳಿಗೆ ಕಳಿಸುತ್ತಾರೆ. ತೆಲುಗಿನಲ್ಲಿ ಒಂದು ಧಾರಾವಾಹಿಯಲ್ಲಿ ನಟಿಸಬೇಕಿತ್ತು. ಕಾರಣಾಂತರದಿಂದ ಅದು ಆಗಲಿಲ್ಲ. ಅಷ್ಟರಲ್ಲಿ ಭೈರವ ಸಿಕ್ಕಿದೆ. ಈ ಪಾತ್ರಕ್ಕೆ ಸಾಕಷ್ಟು ತಯಾರಿ ಮಾಡಿದ್ದೆ. ನಾನು ಅಲ್ಲದಿರುವ ಇಂತಹ ಪಾತ್ರ ಮಾಡಬೇಕಿತ್ತು ಎನ್ನುವ ಆಸೆಯೂ ಇತ್ತು. ಇದಕ್ಕಾಗಿ ಸಿಕ್ಕಾಪಟ್ಟೆ ವರ್ಕೌಟ್ ಮಾಡಿದೆ. ಪಾತ್ರವೂ ಹಲವು ಏರಿಳಿತಗಳನ್ನು ಹೊಂದಿದೆ. ಬೇರೆ ಬೇರೆ ನಿರ್ದೇಶಕರಿಂದ ಭಿನ್ನ ರೂಪವೂ ಸಿಕ್ಕಿದೆ. ಭಾಷೆ, ಅಭಿನಯ ಎಲ್ಲ ಚೆನ್ನಾಗಿದೆ.

◆ **ಮುಂದಿನ ಪಾತ್ರದ ಕನಸು?**

ಸಾಕಷ್ಟು ಪಾತ್ರಗಳನ್ನು ಮಾಡುವ ಆಸೆ ಇದೆ. ಬಹುತೇಕ ರಾಜ್‌ಕುಮಾರ್ ಅವರ ಪಾತ್ರಗಳು ತುಂಬ ಕಾಡುತ್ತವೆ. ಅಂತಹ ಪಾತ್ರಗಳಿಗೆ ಜೀವ ತುಂಬಬೇಕು ಎನ್ನುವ ಆಸೆ ಹುಟ್ಟುತ್ತದೆ. ಈಗ ನಾನು ಒಂದು ವಿಶೇಷ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. 'ಅನಾಥರು' ಸಿನಿಮಾದಲ್ಲಿ ಉಪೇಂದ್ರ ನಿರ್ವಹಿಸಿದ ಪಾತ್ರವನ್ನು ನಾನು ಮಾಡಿದರೆ ಹೇಗಿರಬಹುದು ಎನ್ನುವ ಕಲ್ಪನೆ ಆಗಾಗ ಬರುತ್ತದೆ. ಸಿನಿಮಾ ಮಾಡಲು ತುಂಬ ಆಸಕ್ತಿ ಇದೆ. ಸಿನಿಮಾಕ್ಕೆ ಹಿಂದೆ ಹೋಗಲು ಸಾಧ್ಯ ಆಗಲಿಲ್ಲ. ಮುಂದಿನ ಅವಕಾಶಕ್ಕೆ ಕಾಯುತ್ತಿದ್ದೇನೆ. ಪಾತ್ರ ಹೀಗೇ ಇರಬೇಕು ಎನ್ನುವ ಯೋಚನೆಯಿಲ್ಲ. ನಾಯಕ ಆಗದಿದ್ದರೂ ಪೋಷಕ ಪಾತ್ರ ಆದರೂ ಸರಿ. ಆದರೆ ಪಾತ್ರಕ್ಕೆ ಅಭಿನಯಿಸಲು ಅವಕಾಶ ಇರಬೇಕು. ವೀಕ್ಷಕರು ಆ ಪಾತ್ರದ ಮೂಲಕ ನನ್ನನ್ನು ಗುರುತಿಸುವಂತೆ ಆಗಬೇಕು. ಆ ಪಾತ್ರದ ಹೆಸರಿನಿಂದ ನನ್ನನ್ನು ಗುರುತಿಸಿದರೆ ನನಗೆ ತೃಪ್ತಿ ಸಿಗುತ್ತದೆ. ನಾನು ಮಾಡಿದ್ದಕ್ಕೂ ಸಾರ್ಥಕ ಭಾವದ ಜೊತೆ ಪಾತ್ರಕ್ಕೆ ನ್ಯಾಯ ಕೊಟ್ಟೆ ಎಂದು ಅನ್ನಿಸುತ್ತದೆ.

■ ರಾಘವೇಂದ್ರ ಕೆ.